ಶ್ರೀ ಕುಮಾರ್ ಬಂಗಾರಪ್ಪ : ಇದರ ಬಗ್ಗೆ ಕೋಲಾರ, ತುಮಕೂರು ಮತ್ತು ಧಾರವಾಡ ಇಂಥ ಜಾಗಗಳಲ್ಲಿ ರೈತರ ಸಹಕಾರದಿಂದ ಹೂಳೆತ್ತುವ ಕಾರ್ಯಕ್ರಮ ತಕ್ಕಮಟ್ಟಿಗೆ ಅದು ಯಶಸ್ವಿಯಾಗಿದೆ. ಆದರೆ ಕೆಲವು ಜಾಗಗಳಲ್ಲಿ ಅದು ಮಲೆನಾಡು ಭಾಗ ಇರಬಹುದು, ಕಪ್ಪುಮಣ್ಣು ಇರುವ ಜಾಗಗಳಲ್ಲಿ ಹೂಳನ್ನು ತೆಗೆದುಕೊಂಡು ಹೋಗಿ ಮತ್ತೆ ಗದ್ದೆಯಲ್ಲಿ ಹಾಕುವ ಪ್ರವೃತ್ತಿ ಇಲ್ಲದೇ ಇರುವುದರಿಂದ ಯಾವ ರೀತಿ ಕಾರ್ಯಕ್ರಮವನ್ನು ರೂಪುಗೊಳಿಸಬೇಕೆನ್ನುವ ವ್ಯವಸ್ಥೆಯನ್ನು ಇನ್ನೂ ಮಾಡಿಲ್ಲ ಬರುವ ಮಿಟಿಂಗ್‌ನಲ್ಲಿ ಚರ್ಚೆ ಮಾಡಿ ರಾಜ್ಯದ ಸಲಹಾ ಸಮಿತಿ ಜೊತೆ ಚರ್ಚೆಮಾಡಿ ಯಾವ ರೀತಿ ನಾವು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಯೋಚಿಸುತ್ತೇವೆ. ಏಕೆಂದರೆ ಕರಾವಳಿ ಪ್ರದೇಶಗಳಲ್ಲಿ ಒಂದು ರೀತಿ ಇದೆ. ಕರಾವಳಿ ಘಟ್ಟದ ಮೇಲುಗಡೆ ಒಂದು ವ್ಯವಸ್ಥೆ ಇದೆ. ಕಪ್ಪುಮಣ್ಣು ಇರುವ ಬಯಲುಸೀಮೆ ಕಡೆ ಒಂದು ವ್ಯವಸ್ಥೆ ಇದೆ. ನಮ್ಮ ಕೋಲಾರ ಭಾಗದಲ್ಲೂ ಒಂದು ರೀತಿ ಇದೆ. ಹಾಗಾಗಿ ಯಾವ ರೀತಿ ವ್ಯವಸ್ಥೆಗಳನ್ನು ಮಾಡಬೇಕೆಂದು ಯೋಚಿಸಿ ಆದಷ್ಟು ಬೇಗ ನಾವು ಆ ಕಾರ್ಯಕ್ರಮವನ್ನು ರೂಪುಗೊಳಿಸುತ್ತೇವೆ.

ಶ್ರೀ ಕೆ.ಬಿ. ಕೋಳಿವಾಡ್ : ರಾಣಿಬೆನ್ನೂರ್ ನಗರದಲ್ಲಿ ಒಂದು ಮಹಾ ದೊಡ್ಡ ಕೆರೆ ಇದೆ. ಆ ಕೆರೆ ಸಂಪೂರ್ಣವಾಗಿ ಹೂತುಹೋಗಿದೆ. ಆ ಹೂಳನ್ನು ನಾವು ಎತ್ತಿಸದೇ ಹೋದರೆ ಈಗಾಗಲೇ ರಾಣಿಬೆನ್ನೂರ್ ನಗರದಲ್ಲಿರುವ ಎಲ್ಲಾ ಬೋರ್‌ವೆಲ್‌ಗಳೂ ಒಣಗಿ ಹೋಗಿವೆ. ಅದು ಕುಡಿಯುವ ನೀರಿನ ಸಮಸ್ಯೆಗೂ ಸಂಬಂಧಪಟ್ಟಿದೆ. ಆದರೆ ಅಲ್ಲಿಯ ಮಣ್ಣನ್ನು ರೈತರು ತೆಗೆದುಕೊಂಡು ಹೋಗುವುದಕ್ಕೆ ಸಿದ್ಧರಿಲ್ಲ. ಅದು ಜಿಗುಟಾದ ಮಣ್ಣು. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿರುವುದೇನೆಂದರೆ ಆ ಕೆರೆಯ ಹೂಳನ್ನು ಎತ್ತಿಸುವ ಕೆಲಸವನ್ನು ಪ್ರಾರಂಭ ಮಾಡುತ್ತೀರಾ? ಆ ರೀತಿ ಮಾಡಿ ಅಲ್ಲಿಯ ಮಣ್ಣನ್ನು ಅಲ್ಲೇ ಒಡ್ಡಿಗೆ ಹಾಕಿ ಅದನ್ನು ಶೇಖರಣೆ ಮಾಡುವ ಕಾರ್ಯವನ್ನು ತಾವು ಕೈಗೊಳ್ಳುತ್ತೀರಾ?

ಶ್ರೀ ಕುಮಾರ್ ಬಂಗಾರಪ್ಪ : ರಾಣಿಬೆನ್ನೂರಿನ ಅಸುಂಡಿಕೆರೆ, ದೊಡ್ಡಕೆರೆ, ಬೆನಕಗೊಂಡನಕೆರೆ ಈ ರೀತಿ ಮೂರು ಕೆರೆಗಳು ಇವೆ. ಆ ಮೂರು ಕೆರೆಗಳಲ್ಲೂ ಹೂಳೆತ್ತಬೇಕಾಗಿದೆ. ಆದರೆ ಹಣದ ಲಭ್ಯತೆ ಇಲ್ಲದೇ ಇರುವುದರಿಂದ ಅದನ್ನು ಮಾಡುವುದಕ್ಕಾಗಿಲ್ಲ. ಅಲ್ಲಿ ಬಹಳ ಜಿಗುಟು ಮಣ್ಣಿದೆ ಎಂದು ಏನು ಹೇಳುತ್ತಿದ್ದಾರೆ, ಅದರ ಬಗ್ಗೆ ಇಂಜಿನಿಯರ್ ಜೊತೆ ಕುಳಿತು ಮಾತನಾಡಿ ಅವರು ಯಾವ ರೀತಿ ಸಲಹೆ ಕೊಡುತ್ತಾರೆ, ಆ ರೀತಿ ಮಾಡುತ್ತೇವೆ. ಏಕೆಂದರೆ, ಹೂಳೆತ್ತಿದ ಮೇಲೆ ಆ ಮಣ್ಣು ಮತ್ತೆ ಕೆರೆಗೆ ವಾಪಸ್ ಬರಬಾರದು. ಅದಕ್ಕಾಗಿ ಕಾರ್ಯಕ್ರಮವನ್ನು ಯಾವ ರೀತಿ ಮಾಡಬೇಕೆನ್ನುವ ಬಗೆಗೆ ತಕ್ಷಣ ಈ ವರ್ಷವೇ ಅದರ ಬಗ್ಗೆ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ.ಬಿ. ಕೋಳಿವಾಡ್ : ಹೋದ ಸಾರಿ ಮೂರು ಕೆರೆ ತೆಗೆದುಕೊಂಡಿದ್ದರು. ಆದರೆ ರಾಣಿಬೆನ್ನೂರು ನಗರದ ಕೆರೆಯನ್ನು ತೆಗೆದುಕೊಂಡಿಲ್ಲ. ಬಹಳ ಅವಶ್ಯಕತೆ ಇದೆ; ಈ ವರ್ಷವಾದರೂ ಅದನ್ನು ತೆಗೆದುಕೊಳ್ಳಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕುಮಾರ್ ಬಂಗಾರಪ್ಪ : ಈ ಸಾರಿ ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇವೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಶ್ರೀ ಪ್ರಭಾಕರ ಬಂಗೇರಾ ಅವರದ್ದು.

ಶ್ರೀ ಕೆ. ಪ್ರಭಾಕರ ಬಂಗೇರ : ಮಾನ್ಯ ಅಧ್ಯಕ್ಷರೆ, ನನಗೆ ಉತ್ತರವೇ ಬಂದಿಲ್ಲ.

ಅಧ್ಯಕ್ಷರು: ಸರ್ಕಾರದವರು ಮೂರು ವಾರ ಟೈಮ್ ಬೇಕು ಎಂದು ಕೇಳಿದ್ದಾರೆ. ಬಹುಶಃ ಪ್ರಶ್ನೆ ಸ್ವಲ್ಪ ದೊಡ್ಡದಾಗಿರಬಹುದು.

ಶ್ರೀ ಡಿ.ವಿ.ಸದಾನಂದಗೌಡ :ಮಾನ್ಯ ಅಧ್ಯಕ್ಷರೆ, ಸದನಕ್ಕೆ ಒಂದು ಮಾಹಿತಿಯನ್ನು ಕೊಟ್ಟರೆ ಒಳ್ಳೆಯದು. ಬಹುಶಃ ಇವತ್ತು ಹದಿನೈದು ಪ್ರಶ್ನೆಗಳಲ್ಲಿ ಎಷ್ಟು ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ್ದೀರಿ ಎಂದು ಹೇಳಬೇಕಾಗುತ್ತದೆ. ಎಷ್ಟು ಪ್ರಶ್ನೆಗೆ ಮಂತ್ರಿಗಳು ಉತ್ತರ ನೀಡುತ್ತಾರೆ? ಪ್ರತಿ ದಿವಸ ನಾವು ಇದನ್ನೇ ಹೇಳುತ್ತಿದ್ದೇವೆ.

MR. SPEAKER : We have received reply for ten questions.

ಶ್ರೀ ಡಿ.ವಿ. ಸದಾನಂದಗೌಡ :ಇಲ್ಲ ಸಾರ್,ನನಗೆ ಆರು ಪ್ರಶ್ನೆಗೆ ಉತ್ತರ ಬಂದಿದೆ. ಸದನದ ಕಾರ್ಯಕಲಾಪಗಳನ್ನು ನಡೆಸುವಂತಹ ವಿಚಾರ. ಅದೂ ಕೂಡ ಪ್ರಶ್ನೋತ್ತರ. ಸದಸ್ಯರುಗಳಿಗೆ ಅವಕಾಶಗಳು ಸ್ಪಷ್ಟವಾಗಿ ಸಿಗುವಂತಹದ್ದು ಪ್ರಶ್ನೋತ್ತರ ಕಾಲದಲ್ಲಿ ಮಾತ್ರ. ಆ ಸಂದರ್ಭದಲ್ಲಿ ಅವನು ಅದಕ್ಕೆ ಏನಾದರೂ ನೋಡಿಕೊಂಡು ಬಂದು ಉತ್ತರದ ಆಧಾರದಲ್ಲಿ ಬೇರೆ ಉಪ ಪ್ರಶ್ನೆಗಳನ್ನು ಕೇಳಬೇಕಾಗಿದೆ. ಅದನ್ನು ಕೂಡ ಸರಿಯಾದ ಸಮಯದಲ್ಲಿ ಒದಗಿಸುವುದಿಲ್ಲ ಎಂದು ಹೇಳಿದರೆ, ಉತ್ತರ ಬರದಿದ್ದರೆ ಬೇಡ. ಬಂದ ಉತ್ತರ ಕೂಡ ಸರಿಯಾದ ಸಮಯದಲ್ಲಿ ನಮಗೆ ಸಿಗಲಿಲ್ಲ ಎಂದು ಹೇಳಿದರೆ ಇದು ತುಂಬಾ ಖೇದಕರ ಸಂಗತಿ. ದಿನನಿತ್ಯ ನಾವು ತಮ್ಮ ಮುಂದೆ ಹೇಳಿಕೊಳ್ಳುವುದು. ಇದು ನಮಗೂ ಕೂಡ ಸ್ವಲ್ಪ ಆಭಾಸ ಕಾಣುತ್ತದೆ. ಇದಕ್ಕೆ ಏನಾದರೂ ಒಂದು ಪರಿಹಾರ ಆಗಲೇ ಬೇಕು.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಪ್ರತಿ ದಿವಸ ಈ ರೀತಿ ಆಗಿದೆ. ಆ ಅಧಿವೇಶನ ಆರಂಭ ಆದ ನಂತರ ಸಾಕಷ್ಟು ಪ್ರಶ್ನೆಗಳಿಗೆ ಉತ್ತರಗಳನ್ನು ತಡೆಹಿಡಿಯಲಾಗಿದೆ. ಆಮೇಲೆ ಕೊಡುತ್ತೇವೆ, ಮತ್ತೆ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಸಚಿವರು ಇದರ ಬಗ್ಗೆ ಗಮನ ಹರಿಸುತ್ತಾರೋ ಇಲ್ಲವೋ, ಇದನ್ನು ಯೋಚನೆ ಮಾಡದೇ ಹೋದರೆ ಹೇಗೆ? ಕನಿಷ್ಟ ತಮ್ಮ ಕಛೇರಿಯಿಂದ ವಿಶೇಷವಾಗಿರತಕ್ಕ ಒತ್ತನ್ನು ಕೊಟ್ಟು ಕಡ್ಡಾಯ ಮಾಡತಕ್ಕದ್ದು ಒಳ್ಳೆಯದಾಗುತ್ತದೆ. ಇಲ್ಲದೇ ಹೋದರೆ ಅವರು ಉತ್ತರ ಕೊಡುವುದಿಲ್ಲ. ಕೆಲಸವಂತೂ ಮಾಡುವುದಿಲ್ಲ, ಪ್ರಶ್ನೆಗಾದರೂ ಉತ್ತರ ಕೊಟ್ಟರೆ ಅಡ್ಡಿ ಇಲ್ಲ. ಇಲ್ಲದಿದ್ದರೆ ನಾವು ಶಾಸಕರಾಗಿ ಹೇಗೆ ಕೆಲಸ ಮಾಡುವುದಕ್ಕೆ ಆಗುತ್ತದೆ? ಸದಸ್ಯರಿಗೆ ಇರುವ ಒಂದು ಸ್ವಾತಂತ್ರ್ಯ ಪ್ರಶ್ನೋತ್ತರ.

ಶ್ರೀಡಿ.ಕೆ. ಶಿವಕುಮಾರ್ : ಸರ್ಕಾರ ಕೆಲಸ ಮಾಡುವುದೂ ಬಿಡುವುದು ಬೇರೆ ಜನ ತೀರ್ಮಾನ ಕೊಟ್ಟಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ :ನೀವು ಪ್ರಶ್ನೆಗೆ ಉತ್ತರ ಕೊಡದಿದ್ದರೆ ಕೆಲಸ ಏನು ಮಾಡುತ್ತೀರಿ, ಹೇಗೆ ಮಾಡುತ್ತೀರಿ ಎನ್ನುವಂತಹದ್ದು ನಮಗೆ ಗೊತ್ತಾಗುತ್ತದೆ. ಈಗ ನಿಮ್ಮ ಅಧಿಕಾರಿಗಳನ್ನು ನಿಯಂತ್ರಣ ಮಾಡಿಕೊಂಡು ಆನ್ಸರ್ ತರಿಸುವುದಕ್ಕೆ ಆಗುವುದಿಲ್ಲ.....

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧ್ಯಕ್ಷರೆ, ನೀವು ನಮ್ಮ ರಕ್ಷಣೆಗೆ ಬರಬೇಕು.

(ಗೊಂದಲ)

ಅಧ್ಯಕ್ಷರು : ರಕ್ಷಣೆ ಮಾಡುತ್ತಿದ್ದೇವಲ್ಲ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ : ತಾವು ಹೇಳುವುದಕ್ಕೆ ಮುಂಚೆ.....

ಅಧ್ಯಕ್ಷರು : ಒಬ್ಬೊಬ್ಬರು ಮಾತನಾಡಿ. ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ.

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ಸರಿಯಾದಂತಹ, ಸಮರ್ಥವಾದಂತಹ ಆಡಳಿತವನ್ನು ನೀಡಿ ಸಮಸ್ಯೆಗಳನ್ನು ಬಗೆಹರಿಸಿ ಎಂದು ಜನತೆ ತೀರ್ಪು ಕೊಟ್ಟಿದೆ. ಆದರೆ ಆಳಬೇಕಾದವರು ಹಾಳು ಮಾಡುವುದಕ್ಕೆ ಹೊರಟಿದ್ದೀರಿ.

ಅಧ್ಯಕ್ಷರು : ಆಯಿತು ಬಿಡಿ. ಮಾನ್ಯ ಚಂದ್ರೇಗೌಡರು ಉತ್ತರ ಕೊಡುತ್ತಾರೆ.

ಶ್ರೀಎಂ. ಮಹದೇವ್ : ಮಾತು ಮಾತಿಗೆ ನೀವು ಹಾಳು ಮಾಡುತ್ತಿದ್ದೀರಿ ಎಂದು ಹೇಳಿದಿರಿ, ನಾವ್ಯಾಕೆ ಇಲ್ಲಿಗೆ ಬರಬೇಕು? ನಿಮಗೆ ಎಷ್ಟು ಇಂಟರೆಸ್ಟ್ ಇದೆಯೋ ನಮಗೂ ಅಷ್ಟೇ ಇಂಟರೆಸ್ಟ್ ಇದೆ. ಜನ ನಮ್ಮನ್ನು ಒಳ್ಳೆಯ ಕೆಲಸ ಮಾಡುತ್ತಾರೆಂದು ಆರಿಸಿ ಕಳಿಸಿದ್ದಾರೆ.

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ಈಗ ತೋರಿಸುತ್ತಿದೆ ನಿಮ್ಮ ಇಂಟೆರೆಸ್ಟ್.

(ಗೊಂದಲ)

ಶ್ರೀ ಎಂ. ಮಹದೇವ್ : ನಿಮಗೆ ಮಾತ್ರ ಇಂಟರೆಸ್ಟ್ ಇದೆಯಾ ನಮಗೆ ಇಲ್ಲವೇ?

ಅಧ್ಯಕ್ಷರು : ಮಾನ್ಯ ಮಂತ್ರಿಗಳೇ, ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಮಾತನಾಡುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸದಸ್ಯರುಗಳ ಕಳಕಳಿ ನಮಗೂ ಅರ್ಥ ಆಗುತ್ತದೆ. ಸರ್ಕಾರ ಅಂದರೆ ಇವರು ಕೇಳುವುದು ಎಂದು ಆಗಬಾರದು. ಪ್ರತಿ ಒಂದು ಸಮಸ್ಯೆಗೂ ಸರಿಯಾದ ರೀತಿಯ ಉತ್ತರವನ್ನು ಕೊಡಬೇಕಾಗುತ್ತದೆ. ಪ್ರಶ್ನೆ ಒಂದು ಕ್ಷೇತ್ರಕ್ಕೆ ಸಂಬಂಧಪಟ್ಟದ್ದು ಆದರೆ ಒಂದು ಜಿಲ್ಲೆಗೆ ಸಂಬಂಧಪಟ್ಟಿದ್ದು ಆದರೆ ಉತ್ತರ ಸಕಾಲಕ್ಕೆ ಬಂದು ಬಿಡುತ್ತದೆ. ಇಡೀ ರಾಜ್ಯಕ್ಕೆ ಸಂಬಂದಪಟ್ಟಂತೆ ಪ್ರಶ್ನೆ ಕೇಳಿದಾಗ ಕಾಲದ ಅವಶ್ಯಕತೆ ಬೇಕಾಗುತ್ತದೆ. ಎಲ್ಲಾ ಕಡೆಯಿಂದಲೂ ಮಾಹಿತಿ ತರಿಸಬೇಕು. ಈ ಪ್ರಶ್ನೆಯಲ್ಲಿ ಏನಿದೆ ಎಂದರೆ List of tanks under the limits of temples in the Stateನ್ನು ನೀವು ತಯಾರು ಮಾಡಿದ್ದೀರಾ ಎಂದು ಕೇಳಿದ್ದೀರಿ, ಅದಕ್ಕೆ ಹೌದು ತಯಾರಾಗುತ್ತಿದೆ ಎಂದು ಹೇಳಿದ್ದೇವೆ. ಇಡೀ ರಾಜ್ಯದಲ್ಲಿರತಕ್ಕಂಥ ಒಟ್ಟು ಎಷ್ಟು ದೇವಸ್ಥಾನಗಳು ಇದ್ದಾವೆ, ಅದಕ್ಕೆ ಸಂಬಂಧಪಟ್ಟಂತೆ ಕಲ್ಯಾಣಿಗಳು ಎಷ್ಟು ಇದ್ದಾವೆ? ಆ ಕಲ್ಯಾಣಿಗಳಿಗೆ ಸಂಬಂಧಪಟ್ಟಂತೆ ವಿವರಗಳನ್ನು ತರಿಸಲು ಸಮಯ ಬೇಕು ಎನ್ನತಕ್ಕದ್ದನ್ನು ಅವರೂ ಒಪ್ಪುತ್ತಾರೆಂದು ನಾನು ಭಾವನೆ ಮಾಡಿದ್ದೇನೆ.

ಅಧ್ಯಕ್ಷರು : 40 ಸಾವಿರ ದೇವಸ್ಥಾನ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಆದ್ದರಿಂದ ನಾವು ಈಗ ತಕ್ಷಣ ಪ್ರಶ್ನೆ ಕೇಳಿದೆವು. ನಾಳೆ ಉತ್ತರ ಬಂದು ಬಿಡಬೇಕು.....

ಶ್ರೀ ಮಲ್ಲಿಕಾರ್ಜುನ ಖರ್ಗೆ: 40ಸಾವಿರಕ್ಕೂ ಜಾಸ್ತಿ ಇರಬಹುದು. ಏಕೆಂದರೆ, 52 ಸಾವಿರ ಹಳ್ಳಿಗಳು ಇದ್ದ ಮೇಲೆ ಊರಿಗೆ ಎರಡು ದೇವಸ್ಥಾನ ಎಂದರೂ ಸಹ 50 ಸಾವಿರದ ಮೇಲೆ ಹೋಗುತ್ತದೆ.

ಅಧ್ಯಕ್ಷರು: ಕೆಲವು ಊರಿನಲ್ಲಿ ಮೂರ್ನಾಲು ದೇವಸ್ಥಾನಗಳು ಇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: 26 ಸಾವಿರ ರೆವಿನ್ಯೂ ವಿಲೇಜನ್, 26 ಸಾವಿರ ಹ್ಯಾಮ್ಲೆಟ್ಸ್ ಇವೆ.

ಅಧ್ಯಕ್ಷರು: ಮಾನ್ಯ ಶಂಕರಲಿಂಗೇಗೌಡರೇ, ಒಂದು ಕಡೆ ಉತ್ತರ ಬೇಕು ಎಂದು ಹೇಳುತ್ತೀರಿ, ಅವರು ಉತ್ತರ ಹೇಳುವಾಗ ಗಲಾಟೆ ಮಾಡುತ್ತೀರಿ. ಇದು ಯಾವ ನ್ಯಾಯ?

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ: ನಿಖರವಾಗಿ ನಿಮ್ಮೆಲ್ಲೇ ನೀವೇ ಕಳಿಸಿದ್ದು. ನಮಗೆ ಸುತ್ತೋಲೆ ಕಳಿಸಿದ್ದೀರಿ. ಆ ಸುತ್ತೋಲೆ ಪ್ರಕಾರ ಮಾಡಬೇಕಲ್ಲ.

ಅಧ್ಯಕ್ಷರು: ಅವರು ಉತ್ತರ ಕೊಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ: ಉತ್ತರಕ್ಕೆ ಸಮಯ ಬೇಕು ಎಂದು ಕೆಲವಕ್ಕೆ ಹೇಳಬೇಕಾಗುತ್ತದೆ. ನಾವು ಅಲ್ಲೇ ಕುಳಿತುಕೊಂಡು ಪ್ರಶ್ನೆ ಕೇಳಿದವರು ನಮಗೂ ಸಾಕಷ್ಟು ಅನುಭವ ಇದೆ. ಅದನ್ನು ಅವರೂ ಒಪ್ಪುತ್ತಾರೆಂದು ನಾನು ಭಾವನೆ ಮಾಡಿದ್ದೇನೆ. ರಾಜ್ಯಕ್ಕೆ ಸಂಬಂಧವಾದಂತಹ ಸಮಸ್ಯೆಗಳಿಗೆ ಕೆಲವು ಸಾರಿ ಉತ್ತರವನ್ನು ಒದಗಿಸುವುದು ಕಠಿಣ ಆಗುತ್ತದೆ. ಸ್ವಲ್ಪ ಸಮಯ ಹೆಚ್ಚು ಬೇಕಾಗುತ್ತದೆ. ಅದಕ್ಕಾಗಿ ಹೇಳಿದ್ದು.

ಅಧ್ಯಕ್ಷರು: ತಾವು ಹೋದ ಸಲ 31ನೇ ತಾರೀಖಿನ ದಿವಸ ಸಭೆ ಮುಕ್ತಾಯವಾಗುವಾಗ 10ನೇ ತಾರೀಖಿನಿಂದ ಸರ್ವೇ ಸಾಮಾನ್ಯವಾಗಿ ಎಲ್ಲಾ ಉತ್ತರಗಳನ್ನು ತರಿಸಿಕೊಡುತ್ತೇವೆಂದು ಹೇಳಿ ತಾವು ಆಶ್ವಾಸನೆ ಕೊಟ್ಟಿದ್ದೀರಿ. ಆಯಿತು, ಇನ್ನು ಮುಂದಾದರೂ ಸರಿ ಮಾಡಿ.

ಶ್ರೀ ಅರಗ ಜ್ಞಾನೇಂದ್ರ: ಈಗ ತಾವು ಬುಲೆಟಿನ್ ಇಶ್ಯೂ ಮಾಡುವಾಗ ತಾವು ಅವರನ್ನು ಕೇಳಿ ಮಾಡುವುದು ಒಳ್ಳೆಯದು. ಯಾವುದಕ್ಕೆ ಉತ್ತರ ಕೊಡುವುದಕ್ಕೆ ಆಗುತ್ತದೆ ಎಂದು ಕೇಳಿ ಕೊಂಡು ಅದನ್ನು ಮಾತ್ರ ಇಲ್ಲಿಗೆ ತರುವುದು ಒಳ್ಳೆಯದು. ಇಲ್ಲದಿದ್ದರೆ ಅವರು ಹೇಳುತ್ತಾರೆ. ಎಲ್ಲವನ್ನೂ ಮಂತ್ರಿಗಳೇ ಹೋಗಿ ಮಾಡಬೇಕು ಎಂದಿಲ್ಲ. ಅವರ ಮಿಷನರಿಗಳು ಇರುತ್ತದೆ. ನಾನು ಅದಕ್ಕಾಗಿ ಹೇಳಿದ್ದು ಡಿ.ಕೆ. ಶಿವಕುಮಾರ್ ಅವರಿಗೆ ಬೇಜಾರು ಆಯಿತು.

ಶ್ರೀ ಡಿ.ಕೆ. ಶಿವಕುಮಾರ್: ಕೆಲಸವನ್ನೇ ಮಾಡುವುದಿಲ್ಲ ಎಂದರೆ ನಾವೇನು ಕೆಲಸವೇ ಮಾಡುವುದಿಲ್ಲವೇ? ಕೆಲಸ ಮಾಡುವುದಿಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ಅರಗ ಜ್ಞಾನೇಂದ್ರ: ನಿಮ್ಮ ಅಧಿಕಾರಿಗಳನ್ನು ಕಂಟ್ರೋಲ್‌ನಲ್ಲಿಟ್ಟು ಅವರನ್ನು ಕೇಳಿ ಉತ್ತರಗಳನ್ನೇ ತರಿಸುವುದಕ್ಕೆ ಆಗದಿದ್ದರೆ ಕೆಲಸ ಹೇಗೆ ಮಾಡುತ್ತೀರಿ? ಯಾರಿಗೆ ಗೌರವ ಬರುತ್ತದೆ ಹೇಳಿ?

ಅಧ್ಯಕ್ಷರು: ಮಾಡುತ್ತಾರೆ, ಬಿಡಿ. ಮುಂದಿನ ಪ್ರಶ್ನೆ ಚಂದ್ರಕಾಂತ ಬೆಲ್ಲದ್ ಅವರದ್ದು.

ಶ್ರೀ ಆರಗ ಜ್ಞಾನೇಂದ್ರ : ನಾವು ಶಾಸಕರಾಗಿ ಕೆಲಸ ಮಾಡಲು ಆಗುವುದಿಲ್ಲ

(ಗೊಂದಲ)

ಶ್ರೀ ಚಂದ್ರಣ್ಣ : ಮಾನ್ಯ ಅಧ್ಯಕ್ಷರೆ, ನಾವು ನಿನ್ನೆ ಪ್ರಶ್ನೆ ಕೇಳಿ ಇವತ್ತು ಆನ್ಸರ್ ಕೇಳುತ್ತಿಲ್ಲ. ಕನಿಷ್ಟ ಒಂದೂವರೆ ತಿಂಗಳ ಕೆಳಗೆ ಪ್ರಶ್ನೆ ಕಳಿಸಿದ್ದೇನೆ. ಇವತ್ತಿನವರೆಗೂ ಆನ್ಸರ್ ಬಂದಿಲ್ಲ.

ಅಧ್ಯಕ್ಷರು : ಒಂದು ವರ್ಷದ ಹಿಂದೆ ಹೇಗೆ? ಮೊನ್ನೆ ತಾನೇ ಚುನಾಯಿತರಾಗಿದ್ದೀರಿ.

(ಗೊಂದಲ)

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ನಾನು 40 ಪ್ರಶ್ನೆ ಹಾಕಿದ್ದೇನೆ. ಆರು ಪ್ರಶ್ನೆಗೆ ಉತ್ತರ ಬಂದಿದೆ.

(ಗೊಂದಲ)

ಅಧ್ಯಕ್ಷರು : ನೀವು ಚುನಾಯಿತರಾಗಿ ಆರು ತಿಂಗಳಾಗಿದೆ.

(ಗೊಂದಲ)

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ಹೌದಪ್ಪನ ಚಾವಡಿಗೆ ಹೌದಪ್ಪ, ಇಲ್ಲಪ್ಪನ ಚಾವಡಿಗೆಇಲ್ಲ ಎಂದು ಉತ್ತರ ಬಂದಿದೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಬೆಲ್ಲದ್ ಅವರು ಪ್ರಶ್ನೆ ಕೇಳಿ.

(ಗೊಂದಲ)

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ಸ್ವಾಮಿ, ನಾನು 40 ಪ್ರಶ್ನೆಗಳನ್ನು ಹಾಕಿದ್ದೇನೆ. ಆರು ಪ್ರಶ್ನೆಗೆ ಉತ್ತರ ಬಂದಿದೆ. ಹೌದಪ್ಪನ ಚಾವಡಿಗೆ ಹೌದಪ್ಪ, ಇಲ್ಲಪ್ಪನ ಚಾವಡಿಗೆ ಇಲ್ಲಪ್ಪ ಹೀಗೆ ಬಂದಿದೆ.....

ಶ್ರೀ ಚಂದ್ರಣ್ಣ : ಯಾವಾಗ ಉತ್ತರ ಸಿಗುತ್ತದೆ ಎಂದು ಹೇಳಲಿ. ಅದನ್ನಾದರೂ ಕೇಳಿ ಹೇಳಲಿ.

ಶ್ರೀ ಡಿ.ವಿ. ಸದಾನಂದ ಗೌಡ : ನಮ್ಮ ಕಳಕಳಿ ಇಷ್ಟೇ. ಕನಿಷ್ಟ ಆ ಒಂದು ಸದನದ ಸಮಯದಲ್ಲಿ ಪ್ರಶ್ನೋತ್ತರ ಆಗಾಗ ಬರುವಂತಹದು ಯಾರಾದ್ದಾದರೂ ಒಂದು ಛಾನ್ಸ್ ಸಿಗುತ್ತದೆ. ಆ ಲಾಟರಿಯಲ್ಲಿ ನಮಗೆ ಬರುವಂತಹದು. ಹಾಗೆಯೇ ಬರುವಂತಹದು ಅಲ್ಲ. ಆ ಲಾಟರಿ ಹೊಡೆದಿದ್ದನ್ನು ಕೂಡ ತೆಗೆದುಕೊಳ್ಳುವುದಕ್ಕೆ ನಮಗೆ ಯಾವುದಾದರೂ ಒಂದು ಸಾಧನೆಗಳು ಇಲ್ಲವೆಂದಾದರೆ ಏನು ಮಾಡಲಿ ಎಂದು? ಎರಡನೆಯದಾಗಿ ಎಲ್ಲಾ ಇಲಾಖೆಗೂ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಕ್ರೋಢೀಕೃತವಾದಂತಹ ವರದಿಗಳು ಇರುತ್ತವೆ. ಈಗ ಇವತ್ತಿನ ಪ್ರಶ್ನೆ ಬಗ್ಗೆ ಮಾನ್ಯ ಕಾನೂನು ಮಂತ್ರಿಗಳು ಎಲ್ಲಾ ಕಡೆಯಿಂದ ನಾವು ಮಾಹಿತಿ ತರಿಸಿಕೊಳ್ಳಬೇಕು ಎಂದು ಹೇಳಿದರು. ಈಗ ಎಂಡೋಮೆಂಟ್ ಇಲಾಖೆ ಇದೆ. ಅದರಲ್ಲಿ ಸಾಕಷ್ಟು ವಿಚಾರಗಳು, ಆಗಾಗ ದಿನನಿತ್ಯ ಎಲ್ಲಾ ಕಡೆಗೆ ನಡೆಯುವಂತಹದನ್ನು

ಕ್ರೋಢೀಕರಣ ಮಾಡುವಂತಹ ವ್ಯವಸ್ಥೆಗಳು ಇವೆ. ಫ್ಯಾಕ್ಸ್ ಫೋನ್ ಎಲ್ಲಾ ವ್ಯವಸ್ಥೆಗಳು ಇವೆ. ಹತ್ತು ದಿವಸಕ್ಕೆ ಮುಂಚಿತವಾಗಿ ನಮ್ಮ ಪ್ರಶ್ನೆಗಳನ್ನು ಅವರಿಗೆ ಕಳುಹಿಸಿಕೊಡಲಾಗುತ್ತದೆ. ನೀವು ಇನ್ನೂ ಇದಕ್ಕೆ ಉತ್ತರ ಬಂದಿಲ್ಲವೆಂದು ಹೇಳಿದರೆ ಹೇಗೆ? ಅದನ್ನು ಹತ್ತು ದಿವಸಗಳಲ್ಲಿ ತರಿಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದರೆ ಬಹುಶಃ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಾರೆ ಎಂದು ಹೇಳುವಂತಹದನ್ನು ತಾವೇ ತೀರ್ಮಾನ ಕೊಡಬೇಕು.

ಅಧ್ಯಕ್ಷರು: ಎಲ್ಲಾ ಮಂತ್ರಿಗಳಲ್ಲಿ ವಿನಂತಿ. ಆಯಾಯ ಇಲಾಖೆಗೆ ಸಂಬಂಧಪಟ್ಟಂತಹ ಉತ್ತರಗಳನ್ನು ಸಂಗ್ರಹಿಸಿ.

SRI D.B. CHANDRE GOW DA: Information is the keyfor the democratic functioning. ನಾನು ಅದನ್ನು ಇಲ್ಲ ಎಂದು ಹೇಳುವುದೇ ಇಲ್ಲ. ಆದರೆ ಇನ್‌ಫರ್ಮೇಷನ್ ಕೊಡುವಾಗ ಸಾಧ್ಯವಾದಷ್ಟು ಎಲ್ಲಾ ಮಾಹಿತಿಗಳನ್ನು ಒದಗಿಸಿ ಸದಸ್ಯರಿಗೆ ಸಮಾಧಾನವಾದಂತಹ ಉತ್ತರವನ್ನು ಕೊಡಬೇಕು ಎಂದು ನಮ್ಮ ಸದಿಚ್ಛೆ. ಉತ್ತರ ಬೇಡ ಎಂದರೆ, 40 ಸಾವಿರ ದೇವಸ್ಥಾನಗಳು ಇವೆ. ಅದಕ್ಕೆ ಸೇರಿದಂತಹ ಕಲ್ಯಾಣಿಗಳು ಇದ್ದಾವೆ. ಇದರ ಬಗ್ಗೆ ಮಾಹಿತಿ ಸರಿಯಾಗಿ ಸಂಗ್ರಹಿಸುವುದಕ್ಕೆ ಕಲಾವಕಾಶಬೇಕು.

ಅಧ್ಯಕ್ಷರು: ತಾವು ಹೇಳುವುದನ್ನು ಒಪ್ಪಿಕೊಂಡೆ. ಫಾಲೋ ಅಪ್ ಆಕ್ಷನ್ ಇರಬೇಕು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಎಸ್.ಎಸ್.ಪಾಟೀಲ್ ಅವರಿಗೆ ಅರ್ಥ ಆಗಿರಬೇಕು.

MR.SPEAKER : Every day evening follow up action ಮಂತ್ರಿಗಳಲ್ಲಿ ಇರಬೇಕು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: ಪಾಟೀಲ್ ಅವರೇ, ಅವರೂ ಮಂತ್ರಿಯಾಗಿ ಕೆಲಸ ಮಾಡಿದವರೇ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಶಿವಕುಮಾರ್ ಅವರಿಗೆ ಬಹಳ ಸಿಟ್ಟು ಬಂತು. ಕೆಲಸ ಮಾಡುತ್ತಿದ್ದೀರಿ, ಇಲ್ಲ ಎಂದು ಹೇಳುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ನಿಮಗೆ ಗೊತ್ತಿಲ್ಲ. ಅವರಿಗೆ ಗೊತ್ತಾಗುತ್ತದೆ.

MR. SPEAKER: Every day evening, ther should be follow up action on the part of the Ministers.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಮಂತ್ರಿಯಾಗಿ ಕೆಲಸ ಮಾಡಿದವರು, ಅವರಿಗೆ ಗೊತ್ತಾಗುತ್ತದೆ. ನಿಮ್ಮ ಸಮಸ್ಯೆಗೆ ಉತ್ತರ ತರಿಸಬಾರದು ಎಂದಲ್ಲ. ನಿಮಗೆ ಪೂರ್ಣ ಮಾಹಿತಿ ಬೇಕು ಎಂದರೆ ಸ್ವಲ್ಪ ಸಮಯ ಬೇಕು.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಏನು ಮಾಡಬೇಕು ಎಂದರೆ ಎವೆರಿ ಡೇ ಈವನಿಂಗ್ ಫಾಲೋ ಅಪ್ ಆಕ್ಷನ್ ಮಾಡಿ, ಎಷ್ಟು ಪ್ರಶ್ನೆ ಬಂತು? ಇಷ್ಟು ಪ್ರಶ್ನೆ ಏಕೆ ಬಂತು, ಎಲ್ಲಿ ಪೆಂಡಿಂಗ್ ಇದೆ? ಎಲ್ಲಿದೆ ಎಂದು ಪ್ರತಿ ದಿವಸ ಸಾಯಂಕಾಲ ಎಲ್ಲಾ ಮಂತ್ರಿಗಳೂ ವಿಚಾರ ಮಾಡಬೇಕು. ಆಗ ನಿಮಗೆ ಇಮ್ಮೀಡಿಯಟ್ ಮಾಹಿತಿ ಸಿಗುತ್ತದೆ. ಅವರು ತಂದಿಟ್ಟಾಗ ತಾವು ಸಿಗ್ನೇಚರ್ ಮಾಡಬಹುದೇನೋ? ನನಗೆ ಗೊತ್ತಿಲ್ಲ. ಯಾವ ರೀತಿ ಕ್ರಮ ಮಾಡಿರುತ್ತೀರೋ ನನಗೆ ಗೊತ್ತಿಲ್ಲ. ಎವರಿ ಡೇ ಈವನಿಂಗ್ ಎಷ್ಟು ಪ್ರಶ್ನೆ ಬಂದಿತ್ತು, ಎಷ್ಟು ಪೆಂಡಿಂಗ್ ಇದೆ? ಏಕೆ ಪೆಂಡಿಂಗ್ ಇದೆ ಎಲ್ಲಿದೆ ಯಾವ ಲೆವೆಲ್‌ನಲ್ಲಿದೆ ಎಂದು ತಾವು ಸ್ವಲ್ಪ ಮುತುವರ್ಜಿ ವಹಿಸಿ ಮಾಡಿ.

ಶ್ರೀ ಕೆ. ಶ್ರೀನಿವಾಸ ಗೌಡ : ಈ ತರಹ ಖಾಯಿಲೆ ನಮ್ಮ ಸರ್ಕಾರ ನಡೆಸುವಾಗ 4-5 ವರ್ಷ ಆದ ಮೇಲೆ ಬಂತು. ಇದು ಆರು ತಿಂಗಳಿಗೇ ಈ ಖಾಯಿಲೆ ಇವರಿಗೆ ಬಂದಿದೆ. ಇದನ್ನು ವಿಚಾರಿಸಿ.

ಶ್ರೀ ಡಿ.ಬಿ. ಚಂದ್ರೇಗೌಡ: ಅರೇ ತಿಂಗಳಾಗಿದ್ದರಿಂದ ತೊಂದರೆ. ನಾಲ್ಕು ವರ್ಷ ಆಗಿದ್ದರೆ ತೊಂದರೆ ಆಗುತ್ತಿರಲಿಲ್ಲ.

ಅಧ್ಯಕ್ಷರು : ಮಾನ್ಯ ಬೆಲ್ಲದ್ ಅವರೇ ನಿಮ್ಮ ಪ್ರಶ್ನೆ ಕೇಳಿ. ಇಲ್ಲದಿದ್ದರೆ ಲ್ಯಾಪ್ಸ್ ಆಗುತ್ತದೆ.

ಶ್ರೀ ಸಿ. ಚೆನ್ನಿಗಪ್ಪ : ತಾವು ಆದೇಶ ಕೊಡಿ. ಅವರು ಪ್ರಶ್ನೆಗೆ ತಕ್ಕ ಹಾಗೆ ಆನ್ಸರ್ ಕೊಡಬೇಕು.

(ಗೊಂದಲ)

ರಾಜ್ಯದಲ್ಲಿ ಬೃಹತ್ ಕೈಗಾರಿಕೆಗಳಲ್ಲಿ ತೊಡಗಿಸಿರುವ ಹಣ

168(1631) ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98, 98-99, 99-2000ನೇ ಸಾಲುಗಳಲ್ಲಿ ರಾಜ್ಯದಲ್ಲಿ ಸ್ಥಾಪಿಸಿರುವ ಬೃಹತ್‌ಕೈಗಾರಿಕೆಗಳು ಯಾವುವು? ಅವುಗಳುತೊಡಗಿಸಿರುವ ಮೊತ್ತ ಎಷ್ಟು? ಹಾಗೂಅವುಗಳಿಂದ ಆಗುತ್ತಿರುವ ಉತ್ಪಾದನೆ ಎಷ್ಟು ?

ಆ) ಈ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಿದವರು ಯಾರು?

ಇ) ಈ ಬೃಹತ್ ಕೈಗಾರಿಕೆಗಳು ಎಲ್ಲೆಲ್ಲಿ ಇವೆ (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಈ) ಇವುಗಳಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ತೊಡಗಿಸಿದ ಮೊತ್ತ ಎಷ್ಟು?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು)

ಅ) 1997-98, 98-99ಮತ್ತು 99-2000ನೇ ಸಾಲಿನಲ್ಲಿ ಪ್ರಾರಂಭ ಮಾಡಿರುವ ಬೃಹತ್ ಕೈಗಾರಿಕೆಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ. ಈ ಕೈಗಾರಿಕೆಗಳಲ್ಲಿ ಸುಮಾರು 9665.92 ಕೋಟಿ ರೂ. ಗಳ ಬಂಡವಾಳ ಹೂಡಿರುತ್ತದೆ. ಉತ್ಪಾದನೆ ವಿವರಗಳು ಲಭ್ಯವಿರುವುದಿಲ್ಲ.